ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
24.12.2025  7.35 am
<><*<><>*><>

೧. ಇಸ್ರೋದಿಂದ ಇಂದು ಬ್ಲೂಬರ್ಡ್ ಬ್ಲಾಕ್-೨ ಸಂವಹನ ಉಪಗ್ರಹ ಉಡಾವಣೆ; ಸಾರ್ವಜನಿಕ ಸಂಪರ್ಕ ಸುಧಾರಣೆಗೆ ಅನುಕೂಲ

೨. ಮುಂದಿನ ಪೀಳಿಗೆಯ ಆಕಾಶ್ - ಎನ್‌ಜಿ ಕ್ಷಿಪಣಿ ವ್ಯವಸ್ಥೆಯ ಬಳಕೆದಾರ ಮೌಲ್ಯಮಾಪನ ಪ್ರಯೋಗ ಯಶಸ್ವಿ

೩. ಭಾರತೀಯ ಕರಾವಳಿ ಕಾವಲುಪಡೆಗೆ ಮೊದಲ ಮಾಲಿನ್ಯ ನಿಯಂತ್ರಣ ಹಡಗು ಸಮುದ್ರ ಪ್ರತಾಪ್ ಸೇರ್ಪಡೆ

೪. ಯುವ ಪ್ರತಿಭೆಗಳನ್ನು ಪೋಷಿಸಲು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದಿಂದ ಸಮಗ್ರ ಇಂಟರ್ನ್‌ಶಿಪ್ ನೀತಿ ಜಾರಿ

೫. ಮಹಿಳಾ ಟಿ-೨೦ ಕ್ರಿಕೆಟ್ ಸರಣಿ; ಎರಡನೇ ಪಂದ್ಯದಲ್ಲಿ ಶ್ರೀಲಂಕಾ ವಿರುದ್ಧ ಭಾರತಕ್ಕೆ ಏಳು ವಿಕೆಟ್ ಜಯ

<><*<><>*><>

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ-ಇಸ್ರೋ ಇಂದು ಬ್ಲೂಬರ್ಡ್ ಬ್ಲಾಕ್-೨ ಎಂಬ ಸಂವಹನ ಉಪಗ್ರಹವನ್ನು ಉಡಾವಣೆ ಮಾಡಲಿದೆ. ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಇಂದು ಬೆಳಗ್ಗೆ ೮ ಗಂಟೆ ೫೪ ನಿಮಿಷಕ್ಕೆ ಎಲ್‌ವಿಎಂ೩-ಎಂ೬ ಮೂಲಕ ಉಪಗ್ರಹ ಉಡಾವಣೆಯಾಗಲಿದೆ. ಈ ಉಪಗ್ರಹವು ಭೂಮಿಯ ಕೆಳ ಕಕ್ಷೆ ತಲುಪುವ ಅತಿದೊಡ್ಡ ವಾಣಿಜ್ಯ ಸಂವಹನ ಉಪಗ್ರಹವಾಗಿರಲಿದೆ. ಈ ಕಾರ್ಯಾಚರಣೆಯು ಭಾರತದ ಅತ್ಯಂತ ಶಕ್ತಿಶಾಲಿ ಉಡಾವಣಾ ವಾಹನವಾದ ಎಲ್‌ವಿಎಂ-೩ ಯ ಆರನೇ ಕಾರ್ಯಾಚರಣೆಯ ಹಾರಾಟವಾಗಿದೆ. ಬ್ಲೂಬರ್ಡ್ ಬ್ಲಾಕ್-೨ ಉಪಗ್ರಹವನ್ನು ಅಮೆರಿಕಾ ಎಎಸ್‌ಟಿ ಸ್ಪೇಸ್‌ಮೊಬೈಲ್ ಸಂಸ್ಥೆ ಅಭಿವೃದ್ಧಿಪಡಿಸಿದೆ. ಇದನ್ನು ಬಾಹ್ಯಾಕಾಶದಿಂದ ನೇರ ಮೊಬೈಲ್ ಬ್ರಾಡ್‌ಬ್ಯಾಂಡ್ ಸಂಪರ್ಕವನ್ನು ಒದಗಿಸಲು ವಿನ್ಯಾಸಗೊಳಿಸಲಾಗಿದೆ. ಈ ಉಪಗ್ರಹವು ಪ್ರಮಾಣಿತ ಸ್ಮಾರ್ಟ್‌ಫೋನ್‌ಗಳಲ್ಲಿ ೪ಜಿ ಮತ್ತು ೫ಜಿ ಸೇವೆಗಳನ್ನು ಬೆಂಬಲಿಸುವ ಗುರಿಯನ್ನು ಹೊಂದಿದೆ. ಇದು ದೂರದ ಮತ್ತು ಕಡಿಮೆ ಸೇವೆ ಇರುವ ಪ್ರದೇಶಗಳಲ್ಲಿ ವಿಶೇಷವಾಗಿ ಉಪಯುಕ್ತವಾಗಿರುತ್ತದೆ. ಈ ಕಾರ್ಯಾಚರಣೆಯು ಸಾರ್ವಜನಿಕ ಸಂಪರ್ಕವನ್ನು ಸುಧಾರಿಸಲು, ತುರ್ತು ಸಂದರ್ಭಗಳಲ್ಲಿ ಸಂವಹನವನ್ನು ಬೆಂಬಲಿಸಲು ಮತ್ತು ಬಾಹ್ಯಾಕಾಶ ಆಧಾರಿತ

ತಂತ್ರಜ್ಞಾನದ ಮೂಲಕ ಜಾಗತಿಕ ಡಿಜಿಟಲ್ ಪ್ರವೇಶವನ್ನು ವಿಸ್ತರಿಸಲು ಸಹಾಯ ಮಾಡುತ್ತದೆ. ಇದು ಎನ್‌ಎಸ್‌ಐಎಲ್ ನಿರ್ವಹಿಸುವ ವಾಣಿಜ್ಯ ಕಾರ್ಯಾಚರಣೆಯಾಗಿದ್ದು, ಜಾಗತಿಕ ಬಾಹ್ಯಾಕಾಶ ಮಾರುಕಟ್ಟೆಯಲ್ಲಿ ವಿಶ್ವಾಸಾರ್ಹ ಪಾಲುದಾರನಾಗಿ ಭಾರತದ ಬೆಳೆಯುತ್ತಿರುವ ಪಾತ್ರದ ನಿದರ್ಶನವಾಗಿದೆ.

<><*<><>*><>

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಡಿಆರ್‌ಡಿಒ, ಮುಂದಿನ ಪೀಳಿಗೆಯ - ಆಕಾಶ್-ಎನ್‌ಜಿ ಕ್ಷಿಪಣಿ ವ್ಯವಸ್ಥೆಯ ಬಳಕೆದಾರ ಮೌಲ್ಯಮಾಪನ ಪ್ರಯೋಗಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಪರೀಕ್ಷಾರ್ಥ ಪ್ರಯೋಗಗಳ ಸಮಯದಲ್ಲಿ, ಕ್ಷಿಪಣಿಗಳು ವಿವಿಧ ಶ್ರೇಣಿ ಮತ್ತು ಎತ್ತರದಲ್ಲಿ ವೈಮಾನಿಕ ಗುರಿಗಳನ್ನು ಯಶಸ್ವಿಯಾಗಿ ಹೊಡೆದುರುಳಿಸಿವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ವಿವಿಧ ರೀತಿಯ ವೈಮಾನಿಕ ಬೆದರಿಕೆಗಳ ವಿರುದ್ಧ ವಾಯು ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಆಕಾಶ್-ಎನ್‌ಜಿ ಒಂದು ಪ್ರಬಲ ವ್ಯವಸ್ಥೆಯಾಗಿದೆ. ಇದು ಸ್ಥಳೀಯ ರೇಡಿಯೋ ಮಾಪನಾಂಕ ಅನ್ವೇಷಕವನ್ನು ಹೊಂದಿದ್ದು, ಘನ ರಾಕೆಟ್ ಮೋಟಾರ್‌ನಿಂದ ಚಾಲಿತವಾಗಿದೆ. ಆಕಾಶ್-ಎನ್‌ಜಿಯ ಬಳಕೆದಾರ ಮೌಲ್ಯಮಾಪನ ಪ್ರಯೋಗಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಕ್ಕಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ, ಭಾರತೀಯ ವಾಯುಪಡೆ ಮತ್ತು ಸಂಬಂಧಿತ ಕೈಗಾರಿಕೆಗಳನ್ನು ಶ್ಲಾಘಿಸಿದ್ದಾರೆ ಮತ್ತು ಅತ್ಯಾಧುನಿಕ ಕ್ಷಿಪಣಿ ವ್ಯವಸ್ಥೆಯು ವಾಯುಪಡೆಯ ವಾಯು ರಕ್ಷಣಾ ಸಾಮರ್ಥ್ಯಗಳನ್ನು ಮತ್ತಷ್ಟು ಬಲಪಡಿಸುತ್ತದೆ ಎಂದು ಹೇಳಿದ್ದಾರೆ.

<><*<><>*><>

ಗೋವಾ ಶಿಪ್‌ಯಾರ್ಡ್ ಲಿಮಿಟೆಡ್‌ನಲ್ಲಿ ಭಾರತೀಯ ಕರಾವಳಿ ಕಾವಲುಪಡೆ ಮೊದಲ ಮಾಲಿನ್ಯ ನಿಯಂತ್ರಣ ಹಡಗು ಸಮುದ್ರ ಪ್ರತಾಪ್ ಅನ್ನು ಸೇರ್ಪಡೆಗೊಳಿಸಿದೆ. ನಿನ್ನೆ ನಡೆದ ಸೇರ್ಪಡೆ ಸಮಾರಂಭದಲ್ಲಿ ಈ ಹಡಗನ್ನು ಕರಾವಳಿ ಕಾವಲುಪಡೆಗೆ ಔಪಚಾರಿಕವಾಗಿ ಹಸ್ತಾಂತರಿಸಲಾಯಿತು.  ಈ ಹಡಗಿನಲ್ಲಿ ೩೦ ಮಿಲಿಮೀಟರ್ ಸಿಆರ್‌ಎನ್-೯೧ ಗನ್, ಸಂಯೋಜಿತ ಅಗ್ನಿಶಾಮಕ ನಿಯಂತ್ರಣ ವ್ಯವಸ್ಥೆಗಳೊಂದಿಗೆ ಎರಡು ೧೨.೭ ಮಿಲಿಮೀಟರ್ ರಿಮೋಟ್-ನಿಯಂತ್ರಿತ ಬಂದೂಕುಗಳು ಮತ್ತು ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ವ್ಯವಸ್ಥೆಗಳು ಸೇರಿದಂತೆ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.

<><*<><>*><>

ಭಾರತವು ಅಂತಾರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ - ಐಸಿಎಒ ಮಂಡಳಿಗೆ ಅತಿ ಹೆಚ್ಚು ಮತಗಳೊಂದಿಗೆ ಮರು ಆಯ್ಕೆಯಾಗಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್‌ಮೋಹನ್ ನಾಯ್ಡು ತಿಳಿಸಿದ್ದಾರೆ.  ಈ ಕುರಿತು ಸಾಮಾಜಿಕ ಜಾಲತಾಣ ಸಂದೇಶದಲ್ಲಿ

ಸಚಿವರು, ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತೀಯ ವಿಮಾನಯಾನವು ಗಮನಾರ್ಹ ಜಾಗತಿಕ ಮನ್ನಣೆಯನ್ನು ಗಳಿಸಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಹಾಯವನ್ನು ವಿಸ್ತರಿಸುವ ಮತ್ತು ಐಸಿಎಒ ಮಾನದಂಡಗಳು ಮತ್ತು ಶಿಫಾರಸು ಮಾಡಿದ ಅಭ್ಯಾಸಗಳ ಸಮನ್ವಯವನ್ನು ಉತ್ತೇಜಿಸುವ ಮೂಲಕ ಭಾರತವು ಪ್ರಮುಖ ಪಾಲುದಾರನಾಗಿ ಹೊರಹೊಮ್ಮಿದೆ ಎಂದು ಮಾಹಿತಿ ನೀಡಿದ್ದಾರೆ.

<><*<><>*><>

ಮಾಲಿನ್ಯವನ್ನು ತಡೆಯುವ ಪ್ರಯತ್ನದಲ್ಲಿ, ರಾಷ್ಟ್ರ ರಾಜಧಾನಿ ಪ್ರದೇಶ- ಎನ್‌ಸಿಆರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ವಾಯು ಗುಣಮಟ್ಟ ನಿರ್ವಹಣಾ ಆಯೋಗ, ದೆಹಲಿಯ ೩೦೦ ಕಿಲೋಮೀಟರ್ ವ್ಯಾಪ್ತಿಯೊಳಗಿನ ಆರು ಉಷ್ಣ ವಿದ್ಯುತ್ ಸ್ಥಾವರಗಳಿಗೆ ಶೋಕಾಸ್ ನೋಟಿಸ್ ನೀಡಿದೆ. ಪರಿಸರ ಉಷ್ಣ ವಿದ್ಯುತ್ ಸ್ಥಾವರಗಳಿಂದ ಬೆಳೆ ಅವಶೇಷಗಳ ಬಳಕೆ ನಿಯಮಗಳು- ೨೦೨೩ ರ ಅಡಿಯಲ್ಲಿ ಸೂಚಿಸಲಾದ ಮಾನದಂಡಗಳನ್ನು ಪಾಲಿಸದಿದ್ದಕ್ಕಾಗಿ ನೋಟಿಸ್ ನೀಡಲಾಗಿದೆ.

<><*<><>*><>

ಸಹಕಾರಿ ವಲಯದ ಸಮ್ಮೇಳನ ಮತ್ತು ಹರಿಯಾಣ ಪೊಲೀಸ್ ನಿರ್ಗಮನ ಪಥ ಸಂಚಲನ ಸೇರಿದಂತೆ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಪಂಚಕುಲಕ್ಕೆ ಭೇಟಿ ನೀಡಲಿದ್ದಾರೆ. ಇದೇ ವೇಳೆ ಸಚಿವರು, ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಪ್ರತಿಮೆಯನ್ನು ಸಹ ಅವರು ಅನಾವರಣಗೊಳಿಸಲಿದ್ದಾರೆ. ವೀರ್ ಬಾಲ್ ದಿವಸ್ ಅನ್ನು ಗುರುತಿಸಲು ಹರಿಯಾಣ ಸರ್ಕಾರದ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ.

<><*<><>*><>

ಖ್ಯಾತ ಸಾಹಿತಿ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ವಿನೋದ್ ಕುಮಾರ್ ಶುಕ್ಲಾ ಅವರ ನಿಧನಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಂತಾಪ ಸೂಚಿಸಿದ್ದಾರೆ. ನಿನ್ನೆ ನಿಧನರಾದ ವಿನೋದ್ ಕುಮಾರ್ ಶುಕ್ಲಾ ಅವರಿಗೆ ೮೮ ವರ್ಷ ವಯಸ್ಸಾಗಿತ್ತು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ರಾಷ್ಟ್ರಪತಿ, ಶುಕ್ಲಾ ಅವರು ತಮ್ಮ ಅರ್ಥಗರ್ಭಿತ ಮತ್ತು ಶಕ್ತಿಯುತ ಸಂಯೋಜನೆಗಳ ಮೂಲಕ ಗದ್ಯ ಮತ್ತು ಕಾವ್ಯವನ್ನು ಅಪಾರವಾಗಿ ಶ್ರೀಮಂತಗೊಳಿಸಿದ್ದಾರೆ. ಅವರ ನಿಧನವು ಸಾಹಿತ್ಯ ಲೋಕಕ್ಕೆ ತುಂಬಲಾಗದ ನಷ್ಟವನ್ನುಂಟು ಮಾಡಿದೆ ಎಂದು ಹೇಳಿದ್ದಾರೆ. ವಿನೋದ್ ಕುಮಾರ್ ಶುಕ್ಲಾ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ.

<><*<><>*><>

ಯುವ ಪ್ರತಿಭೆಗಳನ್ನು ಪೋಷಿಸಲು ಮತ್ತು ದೇಶದ ಕ್ರೀಡಾ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ರಚನಾತ್ಮಕ ವೇದಿಕೆಯನ್ನು ಒದಗಿಸುವ ಗುರಿ ಹೊಂದಿರುವ ಸಮಗ್ರ ಇಂಟರ್ನ್‌ಶಿಪ್ ನೀತಿಯನ್ನು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಪ್ರಾರಂಭಿಸಿದೆ. ಈ ಉಪಕ್ರಮ, ಸಚಿವಾಲಯ ಮತ್ತು ಅದರ ಸ್ವಾಯತ್ತ ಸಂಸ್ಥೆಗಳಾದ್ಯಂತ ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಅವಕಾಶಗಳನ್ನು ಒದಗಿಸುತ್ತದೆ. ಕ್ರೀಡಾ ಆಡಳಿತ ಮತ್ತು ಸಂಬಂಧಿತ ವೃತ್ತಿಪರ ಕ್ಷೇತ್ರಗಳಿಗೆ ನೇರವಾಗಲಿದೆ ಎಂದು ಸಚಿವಾಲಯ ತಿಳಿಸಿದೆ. ಕ್ರೀಡಾ ಆಡಳಿತ, ಕ್ರೀಡಾ ವಿಜ್ಞಾನ, ಡೋಪಿಂಗ್ ವಿರೋಧಿ, ಕಾರ್ಯಕ್ರಮ ನಿರ್ವಹಣೆ ಕ್ರೀಡಾ ಬೆಂಬಲ ಸೇವೆಗಳಲ್ಲಿ ದೃಢವಾದ ಪ್ರತಿಭಾ ಜಾಲವನ್ನು ನಿರ್ಮಿಸುವ ಗುರಿಯನ್ನು ಈ ಉಪಕ್ರಮ ಹೊಂದಿದೆ. ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯಾ, ಈ ಉಪಕ್ರಮವು ದೇಶದ ಕ್ರೀಡಾ ಪಯಣಕ್ಕೆ ಕೊಡುಗೆ ನೀಡಲು ಯುವಜನತೆಯನ್ನು ಸಬಲೀಕರಣಗೊಳಿಸುತ್ತದೆ ಎಂದು ಹೇಳಿದರು. ಇಂಟರ್ನ್‌ಶಿಪ್ ಕಾರ್ಯಕ್ರಮದಿಂದ ಯುವಕರು ಪ್ರಾಯೋಗಿಕವಾಗಿ ಅನುಭವವನ್ನು ಪಡೆಯಲು ಮತ್ತು ಕ್ರೀಡೆಗಳ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ದೀರ್ಘಕಾಲೀನ ಪರಿಣಾಮ ಬೀರಲು ಅನುವು ಮಾಡಿಕೊಡುತ್ತದೆ ಎಂದು ಸಚಿವರು ಹೇಳಿದರು. ಈ ನೂತನ ನೀತಿಯಡಿಯಲ್ಲಿ, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಭಾರತೀಯ ಕ್ರೀಡಾ ಪ್ರಾಧಿಕಾರ, ರಾಷ್ಟ್ರೀಯ ಡೋಪಿಂಗ್ ವಿರೋಧಿ ಸಂಸ್ಥೆ ಮತ್ತು ರಾಷ್ಟ್ರೀಯ ಡೋಪ್ ಪರೀಕ್ಷಾ ಪ್ರಯೋಗಾಲಯ ಸೇರಿದಂತೆ ಅದರ ಪ್ರಮುಖ ಸಂಸ್ಥೆಗಳಲ್ಲಿ ವಾರ್ಷಿಕವಾಗಿ ೪೫೨ ಇಂಟರ್ನ್‌ಶಿಪ್‌ಗಳನ್ನು ನೀಡಲಾಗುವುದು.

<><*<><>*><>

ವಿಶಾಖಪಟ್ಟಣದಲ್ಲಿ ನಿನ್ನೆ ರಾತ್ರಿ ನಡೆದ ಐದು ಪಂದ್ಯಗಳ ಮಹಿಳಾ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಭಾರತ ತಂಡ ಶ್ರೀಲಂಕಾವನ್ನು ಏಳು ವಿಕೆಟ್‌ಗಳಿಂದ ಮಣಿಸಿದೆ. ಶ್ರೀಲಂಕಾ ನೀಡಿದ್ದ ೧೨೯ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಭಾರತ ತಂಡವು ೧೧.೫ ಓವರ್‌ಗಳಲ್ಲಿ ಗುರಿಯನ್ನು ತಲುಪಿತು. ಭಾರತದ ಪರ ಶಫಾಲಿ ವರ್ಮಾ ೩೪ ಎಸೆತಗಳಲ್ಲಿ ಅಜೇಯ ೬೯ ರನ್ ಗಳಿಸಿದರು. ಶ್ರೀಲಂಕಾ ಪರ ಕಾವ್ಯ ಕವಿಂದಿ, ಮಲ್ಕಿ ಮದಾರ ಮತ್ತು ಕವಿಶಾ ದಿಲ್ಹಾರಿ ತಲಾ ಒಂದು ವಿಕೆಟ್ ಪಡೆದರು. ಇದಕ್ಕೂ ಮುನ್ನ, ಟಾಸ್ ಗೆದ್ದು ಬೌಲಿಂಗ್ ಮಾಡಲು ಆಯ್ಕೆ ಮಾಡಿಕೊಂಡ ಭಾರತೀಯ ಮಹಿಳಾ ತಂಡ, ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ತಂಡವನ್ನು ನಿಗದಿತ ೨೦ ಓವರ್‌ಗಳಲ್ಲಿ ೯ ವಿಕೆಟ್‌ಗೆ ೧೨೮ ರನ್‌ಗಳಿಗೆ ಸೀಮಿತಗೊಳಿಸಿತು. ಭಾರತ ಪರ ವೈಷ್ಣವಿ ಶರ್ಮಾ ಮತ್ತು ಎನ್. ಶ್ರೀ ಚರಣಿ ತಲಾ ಎರಡು ವಿಕೆಟ್ ಪಡೆದರು. ನಾಯಕಿ ಹರ್ಮನ್‌ಪ್ರೀತ್ ಕೌರ್ ನೇತೃತ್ವದಲ್ಲಿ, ಭಾರತ ತಂಡವು ಮಹಿಳಾ ಟಿ-೨೦ ವಿಶ್ವಕಪ್ ಸಿದ್ಧತೆಯ ಭಾಗವಾಗಿ ಶ್ರೀಲಂಕಾ ವಿರುದ್ಧ ಐದು ಟಿ-೨೦ ಪಂದ್ಯಗಳನ್ನು ಆಡುತ್ತಿದೆ. ಈ

ಗೆಲುವಿನೊಂದಿಗೆ ಭಾರತ ಐದು ಪಂದ್ಯಗಳ ಸರಣಿಯಲ್ಲಿ ೨-೦ ಮುನ್ನಡೆಯಲ್ಲಿದೆ. ಸರಣಿಯ ಮೂರನೇ ಪಂದ್ಯ ಇದೇ ೨೮ ರಂದು ತಿರುವನಂತಪುರದಲ್ಲಿ ನಡೆಯಲಿದೆ.

<><*<><>*><>

ಭಾರತೀಯ ಮಹಿಳಾ ಫುಟ್ಬಾಲ್ ತರಬೇತುದಾರರಾದ ರುತುಜಾ ಗುನ್ವಂತ್ ಮತ್ತು ಸುಧಾ ರಾಣಿ, ಫಿಫಾ ತರಬೇತುದಾರ ಶಿಕ್ಷಣ ವಿದ್ಯಾರ್ಥಿವೇತನ ಮೂಲಕ ತಮ್ಮ ಎಎಫ್‌ಸಿ ಎ ಡಿಪ್ಲೊಮಾ ಕೋರ್ಸ್ ಅನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಅಖಿಲ ಭಾರತ ಫುಟ್‌ಬಾಲ್ ಒಕ್ಕೂಟ-ಎಐಎಫ್‌ಎಫ್, ತಾಂತ್ರಿಕ ನಿರ್ದೇಶಕ ಸಬೀರ್ ಪಾಷಾ ಮತ್ತು ಎಐಎಫ್‌ಎಫ್ ತರಬೇತುದಾರ ಅಭಿವೃದ್ಧಿ ಮುಖ್ಯಸ್ಥ ವಿವೇಕ್ ನಾಗುಲ್ ಅವರು ಇಬ್ಬರು ತರಬೇತುದಾರರನ್ನು ವಿದ್ಯಾರ್ಥಿವೇತನಕ್ಕೆ ಶಿಫಾರಸು ಮಾಡಿದ್ದರು.

<><*<><>*><>

ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳಾದ ಆರ್ ಪ್ರಜ್ಞಾನಂದ ಮತ್ತು ಅನೀಶ್ ಗಿರಿ ಅವರ ಆಲ್‌ಪೈನ್ ಎಸ್‌ಜಿ ಪೈಪರ್ಸ್ ನಿನ್ನೆ ಮುಂಬೈನಲ್ಲಿ ನಡೆದ ಚೆಸ್ ಪಂದ್ಯಾವಳಿಯ ಫೈನಲ್‌ನಲ್ಲಿ ಹಾಲಿ ಚಾಂಪಿಯನ್ಸ್ ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ಅವರನ್ನು ಸೋಲಿಸಿ ಗ್ಲೋಬಲ್ ಚೆಸ್ ಲೀಗ್ ೨೦೨೫ ಸೀಸನ್ ೩ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಆಲ್‌ಪೈನ್ ಎಸ್‌ಜಿ ಪೈಪರ್ಸ್ ತಂಡವು ಮೊದಲ ಪಂದ್ಯದಲ್ಲಿ ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್ ತಂಡವನ್ನು ೪-೨ ಅಂತರದಿಂದ ಸೋಲಿಸಿ, ಎರಡನೇ ಪಂದ್ಯದಲ್ಲಿ ೪.೫-೧.೫ ಅಂತರದಿಂದ ಜಿಸಿಎಲ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>